ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ. ಯವರ ನ್ಯಾಯಾಲಯ, ಚಾಮರಾಜನಗರ .
ಸಿಸಿ.631/2015

| | | |
|---|---|---|
| ಸಾಕ್ಷಿದಾರರು ಹೆಸರು | : ಯೋಗೀಶ್ ಕುಮಾರ್ | ದಿನಾಂಕಃ 12.11.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು. |
| ತಂದೆಯ ಹೆಸರು | : ಗೋವಿಂದಯ್ಯ | |
| ವಯಸ್ಸು | : 53 ವರ್ಷ | |
| ಉದ್ಯೋಗ | : ವ್ಯಾಪಾರ | **CW-4** |
| ವಾಸಸ್ಥಳ | : ಬೆಂಗಳೂರು | **PW-7** |

ಮುಖ್ಯ ವಿಚಾರಣೆ : ಮಾನ್ಯ ಎಪಿಪಿರವರಿಂದಃ

ಆರೋಪಿಗಳು ನನಗೆ ಪರಿಚಯ. 2007 ರಲ್ಲಿ ಆರೋಪಿಗಳೊಂದಿಗೆ ನಾನು ಕರಿಕಲ್ಲು ಗಣಿಗಾರಿಕೆಗಾಗಿ ಅವರ ಜಮೀನನ್ನು ಕರಾರಿನ ಮೂಲಕ ಪಡೆದುಕೊಂಡಿರುತ್ತೇನೆ. ಜನವರಿ ಅಥವಾ ಪೆಬ್ರವರಿ 2008 ರಲ್ಲಿ ಸದರಿ ಕರಾರನ್ನು ರದ್ದು ಪಡಿಸಿಕೊಂಡಿರುತ್ತೇವೆ. ಆರೋಪಿಗಳು ಸಂಬಂಧಪಟ್ಟ ಅಧಿಕಾರಿಗಳಿಂದ ಅನುಮತಿ ಪಡೆದು ಆದೇಶವನ್ನು ನೀಡುತ್ತೇವೆ ಎಂದು ಹೇಳಿದ್ದು ಸದರಿ ಆದೇಶ ಪಡೆಯಲು ಕಾನೂನಿನಲ್ಲಿ ತೊಡಕುಗಳಿದ್ದ ಕಾರಣ ಸದರಿ ಕರಾರನ್ನು ನಾವು ರದ್ದುಪಡಿಸಿಕೊಂಡಿರುತ್ತೇವೆ. ಜನವರಿ ಅಥವಾ ಪೆಬ್ರವರಿ 2008 ರಲ್ಲಿ ಆರೋಪಿಗಳು ನಾನು ನೀಡಿದ ರೂ.10,00,000/–ಗಳನ್ನು ಮರಳಿ ನೀಡಿದ್ದು ಕರಾರು ರದ್ದು ಪಡಿಸಿಕೊಂಡಿರುತ್ತೇವೆ. ಆ ಕುರಿತು ಬರವಣಿಗೆ ಆಗಿರುವುದಿಲ್ಲ.

( ಮಾನ್ಯ ಎಪಿಪಿರವರ ಕೋರಿಕೆ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ನೀಡಲಾಯಿತು.)

ಪಾಟೀಸವಾಲುಃ ಮಾನ್ಯ ಎಪಿಪಿರವರಿಂದಃ

ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಆರೋಪಿತರೊಂದಿಗೆ ಮಾಡಿಕೊಂಡ ಕರಾರನ್ನು ಜನವರಿ ಅಥವಾ ಪೆಬ್ರವರಿ 2008 ರಲ್ಲಿ ರದ್ದುಪಡಿಸಿಕೊಂಡಿರಲಿಲ್ಲ ಎಂದರೆ ಸರಿಯಲ್ಲ. ನನ್ನೊಂದಿಗೆ ಕರಾರನ್ನು ರದ್ದುಪಡಿಸಿಕೊಳ್ಳದೆ ಉದ್ದೇಶಪೂರ್ವಕವಾಗಿ ದಿಃ17.11.2008 ರಂದು ಚಾಸಾ 1 ರವರೊಂದಿಗೆ ಕರಿಕಲ್ಲು ಗಣಿಗಾರಿಕೆಗಾಗಿ ಸದರಿ ಜಮೀನಿಗೆ ಸಂಬಂಧಿಸಿ ಕರಾರು ಮಾಡಿಕೊಂಡು ರೂ.10,00,000/– ಪಡೆದುಕೊಂಡಿದ್ದರು ಎಂಬ ವಿಚಾರ ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ. ಚಾಸಾ 1 ರವರಿಗೆ ಮೋಸ ಮಾಡಬೇಕೆನ್ನುವ ಉದ್ದೇಶದಿಂದ ನನ್ನೊಂದಿಗೆ ಮಾಡಿಕೊಂಡ ಕರಾರನ್ನು ಮುಚ್ಚಿಟ್ಟು ಚಾಸಾ 1 ರವರೊಂದಿಗೆ ಕರಾರು ಮಾಡಿಕೊಂಡು ಮುಂಗಡವಾಗಿ ರೂ.10,00,000/– ಗಳನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಈಗ ಓದಿ ಹೇಳಿದಂತೆ ದಿಃ22.10.2013 ರಂದು ಪೋಲೀಸರ

ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ನಿರಾಕರಿಸಿದ ಹೇಳಿಕೆಯನ್ನು ನಿಪಿ 7 ಎಂದು ಗುರುತಿಸಲಾಯಿತು. ನಿಪಿ 7 ರಲ್ಲಿರುವ ಸಂಗತಿಗಳು ಗೊತ್ತಿದ್ದರು ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

ಮರು ವಿಚಾರಣೆ : ಇಲ್ಲಾ.

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇ ಒ.,

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಚಾಮರಾಜನಗರ.